# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 16.07.2010**

## ***ಜಯನಗರ ಮತ್ತು ಬಸವನಗುಡಿ ಪ್ರದೇಶಗಳ ಪಾದಚಾರಿ ಮಾರ್ಗ ಒತ್ತುವರಿ ತೆರವು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಮುಖ್ಯ ಅಭಿಯಂತರರು (ದಕ್ಷಿಣ) ವಲಯ ರವರ ವ್ಯಾಪ್ತಿಯಲ್ಲಿ ದಿನಾಂಕ: 14.07.2010 ರಂದು ಜಯನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 179ರ 5ನೇ ಬ್ಲಾಕ್ ಜಯನಗರ, 9ನೇ ಮುಖ್ಯರಸ್ತೆಯಲ್ಲಿ (36ನೇ ಅಡ್ಡರಸ್ತೆಯಿಂದ 46ನೇ ಅಡ್ಡರಸ್ತೆಯವರೆಗೆ) ಪಾದಚಾರಿ ರಸ್ತೆಗಳಲ್ಲಿ ನಿರ್ಮಿಸಿದ್ದ 5 ತಾತ್ಕಾಲಿಕ ಶೆಡ್‌ಗಳನ್ನು ಮತ್ತು 1 ಅಡ್ಡಗೋಡೆಯನ್ನು ತೆರವುಗೊಳಿಸಲಾಗಿದೆ. ಕಾರ್ಯಾಚರಣೆಯ ಸಮಯದಲ್ಲಿ ಪಾದಚಾರಿ ರಸ್ತೆಯಲ್ಲಿದ್ದ ಮಣ್ಣು, ಕಲ್ಲುಗಳು ಮತ್ತು ಇತರೆ ಅನುಪಯುಕ್ತ ವಸ್ತುಗಳನ್ನು ಸಹ ತೆರವುಗೊಳಿಸಲಾಗಿತ್ತು.

ದಿನಾಂಕ: 14.07.2010 ರಂದು ಬಸವನಗುಡಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.162, 163 ಹಾಗೂ 164ರ ವಿದ್ಯಾಪೀಠ ವಾರ್ಡ್‌ನ ಸರಹದ್ದಿನಲ್ಲಿ ಬರುವ 80 ಅಡಿ ಮುಖ್ಯರಸ್ತೆಯಲ್ಲಿ ವಿದ್ಯಾಪೀಠ ವೃತ್ತದಿಂದ ಹೊಸಕೆರೆಹಳ್ಳಿ ಅಡ್ಡರಸ್ತೆಯವರೆಗೆ ಸುಮಾರು ಒಂದುವರೆ ಕಿ.ಮೀ.ಗಳಷ್ಟು ಉದ್ದಕ್ಕೆ 156ರ ವ್ಯಾಪ್ತಿಯಲ್ಲಿ ಬರುವ 50 ಅಡಿ ಮುಖ್ಯರಸ್ತೆಯಲ್ಲಿ 3ನೇ ಅಡ್ಡರಸ್ತೆ ಹನುಮಂತನಗರ (ಪೆಟ್ರೋಲ್ ಬಂಕ್) ದಿಂದ 22ನೇ ಮುಖ್ಯರಸ್ತೆ ಬನಶಂಕರಿ ಮೊದಲನೇ ಹಂತ ಮುಂದುವರೆದು 3ನೇ ಮುಖ್ಯರಸ್ತೆ ರಾಘವೇಂದ್ರ ಬ್ಲಾಕ್‌ವರೆಗೆ ರಸ್ತೆ ಬದಿಯ ಸುಮಾರು ಒಂದು ಕಿ.ಮೀ.ಗಳಷ್ಟು ಪಾದಚಾರಿ ಭಾಗದಲ್ಲಿ ಅಂಗಡಿ ಮಾಲೀಕರು ಹಾಗೂ ಇತರೆ ಸ್ವತ್ತಿನ ಮಾಲೀಕರು ಅತಿಕ್ರಮಿಸಿಕೊಂಡಿದ್ದ ಮೆಟ್ಟಿಲುಗಳನ್ನು ಹಾಗೂ ಕಬ್ಬಿಣದ ಸೈಡ್ ಲೈನಿಂಗ್ಸ್‌ಗಳನ್ನು ಹಾಗೂ ಪಾದಚಾರಿ ಭಾಗದ ಮೇಲೆ ಚಾಚಿದ್ದ ಎಲ್ಲಾ ಬೋರ್ಡ್‌ಗಳನ್ನು ಹಾಗೂ ಇತರೆ ಅತಿಕ್ರಮಣವನ್ನು ತೆರವುಗೊಳಿಸಿ ಪಾದಚಾರಿಗಳು ಓಡಾಡಲು ಅನುವು ಮಾಡಿಕೊಡಲಾಗಿರುತ್ತದೆ. ಕಾರ್ಯಾಚರಣೆಯ ಸಮಯದಲ್ಲಿ ಸದರಿ ರಸ್ತೆಯಲ್ಲಿ ಕಟ್ಟಲಾಗಿದ್ದ ಬ್ಯಾನರ್‌ಗಳು ಹಾಗೂ ಪೋಸ್ಟರ್‌ಗಳನ್ನು ಸಹ ತೆರವುಗೊಳಿಸಲಾಗಿರುತ್ತದೆ. ಹಾಗೂ ಒತ್ತುವರಿ ಭಾಗವನ್ನು ತೆರವುಗೊಳಿಸುವ ಸಂದರ್ಭದಲ್ಲಿ ರೂ.10,350/-ಗಳ ದಂಡವನ್ನು ವಿಧಿಸಲಾಗಿರುತ್ತದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 16.07.2010**

## ***ಕೆಂಗೇರಿ, ಮಹದೇವಪುರ, ಯಲಹಂಕ ಮತ್ತು ಸಿಟಿ ಮಾರ್ಕೆಟ್ ಪ್ರದೇಶಗಳ ಪಾದಚಾರಿ ಮಾರ್ಗ ಒತ್ತುವರಿ ತೆರವು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಮುಖ್ಯ ಅಭಿಯಂತರರು (ಪೂರ್ವ) ವಲಯ ರವರ ವ್ಯಾಪ್ತಿಯ ವಾರ್ಡ್ ನಂ.110ಕ್ಕೆ ಒಳಪಡುವ ಶಿವಾಜಿನಗರ ಬಸ್ ನಿಲ್ದಾಣದ ಪಾದಚಾರಿ ಮಾರ್ಗದಲ್ಲಿನ ಮುಂಭಾಗದಲ್ಲಿ ಬರುವ ಬೋರಿಂಗ್ ಆಸ್ಪತ್ರೆಯ ಪಾದಚಾರಿ ಮಾರ್ಗದಲ್ಲಿ ಸುಮಾರು ವರ್ಷಗಳಿಂದ ಅನಧಿಕೃತವಾಗಿ ಪೆಟ್ಟಿಗೆ / ಬಟ್ಟೆ ಅಂಗಡಿಗಳನ್ನು ನಿರ್ಮಿಸಿ ಪಾದಚಾರಿಗಳ ಓಡಾಟಕ್ಕೆ ತೊಂದರೆಯುಂಟಾಗುತ್ತಿರುವುದನ್ನು ಗಮನಿಸಿ ದಿನಾಂಕ: 09.07.2010 ರಂದು ತೆರವುಗೊಳಿಸಲಾಗಿರುತ್ತದೆ.

ದಿನಾಂಕ: 15.07.2010 ರಂದು ವಾರ್ಡ್ ನಂ.159ರ ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಮೈಸೂರು ರಸ್ತೆ, ಕೆಂಗೇರಿ ಇಲ್ಲಿ 5 ಕಡೆಗಳಲ್ಲಿ, 1ನೇ ಮುಖ್ಯರಸ್ತೆ ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ 3 ಕಡೆಗಳಲ್ಲಿ ಹಾಗೂ ಕೊಮ್ಮಘಟ್ಟ ರಸ್ತೆ, ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ 14 ಕಡೆಗಳಲ್ಲಿ ಒಟ್ಟು 22 ಕಡೆಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆಂಗೇರಿ) ಉಪ ವಿಭಾಗ ರವರು ತಿಳಿಸಿದ್ದಾರೆ.

ಮುಖ್ಯ ಅಭಿಯಂತರರು (ಮಹದೇವಪುರ) ವಲಯ ರವರು ಪ್ರತಿದಿನ ಮುಖ್ಯರಸ್ತೆಗಳ ಪಾದಚಾರಿ ಮಾರ್ಗದಲ್ಲಿ ಬರುವ ಒತ್ತುವರಿ, ಅತಿಕ್ರಮಣ ಅಂಗಡಿಗಳು ಮತ್ತು ಇತರೆ ವಸ್ತುಗಳನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿಕೊಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಪರಿಸರ ಅಧಿಕಾರಿಗಳು (ಹೂಡಿ) ಉಪ ವಿಭಾಗರವರು ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ತೆರವುಗೊಳಿಸಿರುತ್ತಾರೆ.

ಯಲಹಂಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.4ರಲ್ಲಿ ವಿವಿಧ ಕಡೆಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯವನ್ನು ದಿನಾಂಕ: 15.07.2010 ರಂದು ಕೈಗೊಳ್ಳಲಾಯಿತು ಎಂದು ಮುಖ್ಯ ಅಭಿಯಂತರರು (ಯಲಹಂಕ) ವಲಯ ರವರು ತಿಳಿಸಿದ್ದಾರೆ.

ವಾರ್ಡ್ ನಂ.119, ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 15.07.2010 ರಂದು ಕಲಾಸಿಪಾಳ್ಯ ಬಸ್ ನಿಲ್ದಾಣದ ಬಳಿ ಇರುವ ಆಶ್ವಿನಿ ಬಾರ್ ಹತ್ತಿರವಿದ್ದ, ಕನ್ಸರ್ವೆನ್ಸಿಯಲ್ಲಿ ಅನಧಿಕೃತವಾಗಿ ಶೇಖರಿಸಿ ಇಡಲಾಗಿದ್ದ ಹಳೆಯ ಟೈರ್‌ಗಳನ್ನು ತೆರವುಗೊಳಿಸಲಾಗಿದೆ ಮತ್ತು ಕೆ.ಆರ್. ರಸ್ತೆಯಲ್ಲಿನ ಎಸ್.ಎಲ್.ಎನ್. ಚಾರಿಟೀಸ್ ಕಟ್ಟಡದ ಮುಂಭಾಗದ ಪಾದಚಾರಿ ರಸ್ತೆಯಲ್ಲಿ ಅನಧಿಕೃತವಾಗಿ ಸ್ಥಾಪಿಸಲಾಗಿದ್ದ ಸಣ್ಣ ಪುಟ್ಟ ಅಂಗಡಿಗಳನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ) ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**